
ಕುಡಿದು ತೂರಾಡುತ್ತಾ ಮನೆ ತಲುಪಿ ಚಾಪೆಯ ಮೇಲೆ ಉರುಳಿ ಬಿದ್ದಾಗಲೂ ಈರಿ ಬಿದ್ದಲ್ಲೇ ಮಲಗಿರುವುದು, ಅವಳ ಮೈಗೆ ತನ್ನ ಮೈ ಒತ್ತಿಕೊಂಡು ಪುಟ್ಟ ಮಲಗಿದ್ದು ಬೀರನ ಗಮನಕ್ಕೆ ಬರಲೇ ಇಲ್ಲ.

★★★

ಬೆಳಗಿನ ತಿಂಡಿ ತಿಂದು ಗೌಡರು ಅಂಗಳದಲ್ಲಿ ಎಳೆಬಿಸಿಲಲ್ಲಿ ಕೂತಿದ್ದಾಗ ಅಂಗಡಿ ಸೋಮಣ್ಣ ಬಂದ. ಸೋಮಣ್ಣ ದುಡ್ಡು ಬೇಕಿದ್ದಾಗ ಬರುತ್ತಿದ್ದುದರಿಂದ ಗೌಡರಿಗೆ ಏನೂ ವಿಶೇಷ ಕಾಣಲಿಲ್ಲ. ಅವರ ಮಧ್ಯೆ ದುಡ್ಡಿನ ವ್ಯವಹಾರ ಯಾವಾಗಿಂದಲೋ ಇತ್ತು. ಹೇಳಿದ ದಿನಕ್ಕೆ ಸರಿಯಾಗಿ ಬಡ್ಡಿ ಸೇರಿಸಿ ಸೋಮಣ್ಣ ಕೊಡುತ್ತಿದ್ದುದರಿಂದ ಅವನು ಕೇಳಿದಾಗ ಕೇಳಿದಷ್ಟನ್ನು ಗೌಡರು ಕೊಡುತ್ತಿದ್ದರು. ಸೋಮಣ್ಣ ಅಲ್ಲೇ ಕಟ್ಟೆಯ ಬಳಿ ಕೂತು ಬೀರ ಬಂದಿಲ್ವಾ ಎಂದು ವಿಚಾರಿಸಿದ. ಬೀರ ಎಲ್ಲೋ ಹೆಂಡದ ಬಾಕಿ ಉಳಿಸಿ ಅದರ ವಸೂಲಾತಿಗೆ ಸೋಮಣ್ಣ ಬಂದಿದ್ದಾನೆ ಎಂದು ಊಹಿಸಿದ ಗೌಡರು, ''ಅವನ ಹೆಂಡದ ಬಾಕಿಗೂ ನಂಗೂ ಸಂಬಂಧ ಇಲ್ಲ ಅಂತ ಎಷ್ಟು ಬಾರಿ ಹೇಳಬೇಕು ನಿಂಗೆ'' ಅಂತ ರೇಗಿದರು. ಹಂಗಲ್ಲ ಎಂದು ಸೋಮಣ್ಣ ಗೊಣಗುತ್ತಾ, ಜೇಬಿಂದ ಒಂದಿಷ್ಟು ನೋಟು ತೆಗೆದು ಅವರ ಮುಂದಿಟ್ಟ. ನಿಂದೇನು ಬಾಕಿ ಇಲ್ಲವಲ್ಲ, ಇದೇನು? ಎಂದು ಗೌಡರು ಕೇಳಿದರು.



“ನಿನ್ನೆ ಬೀರ ಬಂದಿದ್ದ. ಕುಡಿದು ತಗೋ ದುಡ್ಡು ಅಂತ ಇಷ್ಟು ತೆಗೆದಿಟ್ಟ. ಹಾಗೆ ಇಟ್ಟವ ಅಲ್ಲೇ ಮರೆತು ಬಂದ. ಅವನ ಹತ್ತಿರ ಇಷ್ಟು ದುಡ್ಡು ನೋಡಿ ಎಲ್ಲೋ ಕದ್ದಿರಬಹುದು ಅಂತ ಅನುಮಾನ ಬಂತು. ಅವನು ನಿಮ್ಮನೆ ಆಳಲ್ವಾ. ಕದ್ದರೆ ಇಲ್ಲೇ ಕದ್ದಿರಬಹುದು ಅಂತ ಊಹಿಸಿ ತಂದೆ” ಎಂದು ಸೋಮಣ್ಣ ವಿವರಿಸಿದ.

ಗೌಡರು ತಮ್ಮ ದುಡ್ಡೇನಾದರೂ ಕಳೆದಿದೆಯಾ ಅಂತ ಯೋಚಿಸಿದರು. ರೂಮಿನ ಒಳಗೆ ಪಿಟಾರಿಯಲ್ಲಿರುವ ದುಡ್ಡು ಬೀರ ಹ್ಯಾಗೆ ಕದ್ದಾನು ಅಂತಲೂ ಅನಿಸಿತು. ಅಥವಾ ನಿನ್ನೆ ಪೇಟೆಯಿಂದ ವಾಪಸು ಬಂದು ತಾವು ಸ್ನಾನಕ್ಕೆಂದು ಹೋದಾಗ ಅಂಗಿಯನ್ನು ಬಚ್ಚಲುಮನೆಯ ಲಾಯದಲ್ಲಿ ನೇತುಹಾಕಿದ್ದಾಗ ಕದ್ದಿರಬಹುದೇ ಎಂಬ ಅನುಮಾನವೂ ಬಂತು. ಇಲ್ಲಿಯವರೆಗೂ ಅಂಥದೇನೂ ಮಾಡಿಲ್ಲ. ಆದರೂ ನಿನ್ನೆ ಐನೂರು ಕೇಳಿದನಲ್ಲ. ಕೊಡಲಿಲ್ಲ ಎಂದು ಕದ್ದನೇ? ಗೌಡರ ಅನುಮಾನದ ಹುತ್ತ ಬೆಳೆಯತೊಡಗಿತು.

ಮತ್ತೆ ಅತ್ತಿತ್ತ ನೋಡಿದ ಸೋಮಣ್ಣ ಹೇಳಲೋ ಬೇಡವೋ ಅಂತ ಅನುಮಾನಿಸಿದ. “ಮತ್ತೆ... ಈ ದುಡ್ಡು ಹೆಂಗೆ ಬಂತೋ ಅಂತ ಕೇಳಿದ್ದಕ್ಕೆ ಗೌಡ್ರು ಈರಿಗೆ ಕೊಟ್ಟಿದಾರೆ ಅಂದ್ಬಿಟ್ಟ. ನೀವು ಹಂಗಲ್ಲ ಅಂತ ನಂಗೊತ್ತು. ಆದರೆ, ಈ ಮಾತು ಕೇಳ್ದೋರು ಏನಾದರೂ ಅಂದ್ಕೋಬಹುದು ನೋಡಿ, ಅದಕ್ಕೇ ಹೇಳೋಣ ಅಂತ ಬಂದೆ.”

ಗೌಡರಿಗೆ ನೆಲವೇ ನಡುಗಿದಂತಾಯ್ತು. ಅವರೇನೂ ಈರಿಯ ಮೇಲೆ ಕಣ್ಣು ಹಾಕಿದವರಲ್ಲ. ಅವಳ ಜೊತೆ ಅವರ ಮಾತೂ ಅಷ್ಟಕ್ಕಷ್ಟೆ. ಏನಿದ್ದರೂ ಅವಳ ವ್ಯವಹಾರ ತಮ್ಮ ಹೆಂಡತಿಯ ಜೊತೆ. ಕೆಲಸದ ಕೂಲಿ, ಚಾಲಿ ಸುಲಿದ ಕೂಲಿಯನ್ನೂ ಈರಿಗೆ ಕೊಡುವವರು ತಮ್ಮ ಹೆಂಡತಿಯೇ. ಹಾಗಿದ್ದಾಗ ಈ ಮಾತು ಹ್ಯಾಗೆ ಬಂತು? ಇದೇನಾದರೂ ತಮ್ಮ ಹೆಂಡತಿಗೆ ಗೊತ್ತಾದರೆ ತಮ್ಮ ಗತಿ ಏನು ಎಂಬ ಚಿಂತೆಯೂ ಆಯಿತು.